**ದ್ವಿತೀಯ ಬಿ.ಕಾಂ**
**ನಾಲ್ಕನೆಯ ಚತುರ್ಮಾಸ ಏಪ್ರಿಲ್ 2020**
**ಕನ್ನಡ ಭಾಷೆ**

**ಸಂದರ್ಭ ಸಹಿತ ಈ ಕೆಳಗಿನ ವಾಕ್ಯಗಳನ್ನು ವಿವರಿಸಿ. (ಒಂದು ಸಂದರ್ಭ ವಾಕ್ಯಕ್ಕೆ 4 ಅಂಕಗಳು)**

ಮಾದರಿ: ಪದ್ಯದ ಹೆಸರು : **ನಿಮ್ಮ ಕುಲವಾಕುಲಮಂ ನಿಮಗುಂಟು ಮಾಡುಗುಂ**
ಕವಿಯ ಹೆಸರು : **ಪಂಪ**

**1. ಭಗವತಿಯೇಱುವೆಟ್ಟ ತೆರದಿಂ ಕಥೆಯಾಯ್ತಿವರೇಱು**

ಈ ಮೇಲಿನ ವಾಕ್ಯವನ್ನು ಕವಿ ಪಂಪ ಬರೆದಿರುವ ವಿಕ್ರಮಾರ್ಜುನ ವಿಜಯ ಎಂಬ ಕಾವ್ಯದಿಂದ ಆರಿಸಿದ "ನಿಮ್ಮ ಕುಲವಾಕುಲಮಂ ನಿಮಗುಂಟು ಮಾಡುಗುಂ" ಎಂಬ ಪದ್ಯ ಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಕರ್ಣ ದುರ್ಯೋಧನನಿಗೆ ಹೇಳುತ್ತಾನೆ. ಭೀಷ್ಮನಿಗೆ ವೀರ ಪಟ್ಟವನ್ನು ಕಟ್ಟಿ ಸಂತೋಷದಿಂದ ಹಗೆಗಳನ್ನು ತನ್ನ ಕಾಲಡಿಯಲ್ಲಿ ಬೀಳಿಸಿಕೊಳ್ಳುತ್ತೇನೆ ಎಂದು ಅಹಂಕಾರದಿಂದ ದುರ್ಯೋಧನ ಮಾತನಾಡುವ ಸಂದರ್ಭದಲ್ಲಿ ಈ ಮಾತು ಬಂದಿದೆ.

ಭೀಷ್ಮನ ದೌರ್ಬಲ್ಯವನ್ನು ಕರ್ಣ ಹೇಳುತ್ತಾ ಒಂದು ಹೆಣ್ಣು ಯುದ್ಧಕ್ಕೆ ಹೋಗಿ ಗೆದ್ದು ಬರುವ ಕಥೆಯಾಯ್ತು ಇವರ ಯುದ್ಧ. ಇಲ್ಲಿ ಯಾವ ರೀತಿಯ ವೀರ, ಪರಾಕ್ರಮದ ಮಾತೂ ಇಲ್ಲ ಹಾಗೆ ಗೆಲುವೂ ಅಸಾಧ್ಯ ಎನ್ನುವಂತಿದೆ ಭೀಷ್ಮನ ಈ ಯುದ್ಧ. ಶಕ್ತಿ ಸಾಮರ್ಥ್ಯ ಇಲ್ಲದವರಿಗೆ ವೃದ್ಧರಿಗೆ ನೀನು ಪಟ್ಟಕಟ್ಟಿ ಯುದ್ಧರಂಗದಲ್ಲಿ ಶತೃಗಳ ಮುಂದೆ ನಗೆಪಾಟಲಾಗುತ್ತೀಯೆ ಎಂದು ಕರ್ಣ ಹೇಳುತ್ತಾನೆ.

ತನ್ನ ಆಪ್ತ ಮಿತ್ರ, ದೊರೆಯೂ ಆಗಿರುವ ದುರ್ಯೋಧನ ಹಿರಿಯನಾದ, ವೃದ್ಧನಾದ ಭೀಷ್ಮನನ್ನು ನಂಬಿಕೊಂಡು ವೀರಪಟ್ಟ ಕಟ್ಟುವ ಮೂಲಕ ತನ್ನ ಕೆಡುಕನ್ನು ತಾನೇ ಆಹ್ವಾನಿಸಿಕೊಳ್ಳುತ್ತಿದ್ದಾನೆ ಎನ್ನುವ ಭೀತಿಯಿಂದ ಭೀಷ್ಮನ ದೌರ್ಬಲ್ಯವನ್ನು ಎತ್ತಿ ಆಡುತ್ತಾನೆ. ಇಲ್ಲಿ ದುರ್ಯೋಧನನ ಬಗ್ಗೆ ಕರ್ಣನಿಗೆ ಇರುವ ಅತಿಯಾದ ಪ್ರೀತಿ, ಅವನೇ ಗೆಲ್ಲಬೇಕೆಂಬ ಆಸೆಯು ಈ ರೀತಿಯ ಮಾತಿನಿಂದ ವ್ಯಕ್ತವಾಗುತ್ತದೆ.

**ಉಳಿದ ವಾಕ್ಯಗಳಿಗೆ ಉತ್ತರಿಸಿ:**

2. ನಿಟ್ಟೆಲ್ವಂ ಮುಱಿವೊಡೆನಗೆ ಪಟ್ಟಂಗಟ್ಟಾ
3. ನಾಲಗೆ ಕುಲಮಂ ತುಬ್ಬುವವೊಲುಱದೆ ನೀಂ ಕೆಡೆನುಡಿವೈ
4. ಕಲಹದೊಳಣ್ಣ ನಿಮ್ಮ ಕುಲವಾಕುಲಮಂ ನಿಮಗುಂಟುಮಾಡುಗುಂ
5. ಸೂಟ್ಟಿಡೆಯಲಪ್ಪುದು ಕಾಣ ಮಹಾಜಿರಂಗದೊಳ್

ಭಾವಾರ್ಥ: ಪದ್ಯ : **"ಪುಣ್ಯ ಮುಳ್ಳವರ್ ಸತ್ತಪರೇ"**
ಕವಿ : **ನಯಸೇನ**

ಅವರಿವರೆಂದು ಭಾವಿಸದೆ ನೋಡದೆ ಭೋಂಕನೆ ಬಾಗಿಲಲ್ಲಿ ನಿಂ
ದವನಮರ್ದೊತ್ತಿ ಸಾರ್ಚಿ ತಲೆಯಂ ಪಿಡಿದೆತ್ತಿ ಧರಿತ್ರಿಗಿಕ್ಕಿ ಮ
ತ್ತವಯವದಿಂ ಕಱುತ್ತಿಱಿದು ಕೊಂದು ಮಹಾಬಲನಂ ತಳಾಱಿನಂ ॥
ತವಿತಥಮಪ್ಪ ಪನ್ನಗನಿವಾಸದಿನೋಡಿದನಂಜಿ ನಿರ್ದಯಂ

11ನೇ ಶತಮಾನದ ಉತ್ತರಾರ್ಧದಲ್ಲಿದ್ದ ನಯಸೇನ ಕವಿಯ ಧರ್ಮಾಮೃತ ಎಂಬ ಕಾವ್ಯ ಭಾಗದಿಂದ ಆಯ್ದ "ಪುಣ್ಯಮುಳ್ಳವರ್ ಸತ್ತಪರೇ" ಎಂಬ ಪದ್ಯ ಭಾಗದಿಂದ ಆರಿಸಲಾಗಿದೆ.

ರಾಜ್ಯದ ಆಸೆಯಿಂದ, ತನ್ನ ಮಗನೇ ರಾಜನಾಗಬೇಕೆಂಬ ದುರುದ್ದೇಶದಿಂದ ಶ್ರೀದತ್ತಶೆಟ್ಟಿ, ಗುರುಮುಖೇನ ಧನಶ್ರೀ ಹೆರುವ ಮಗು ನಾಡಿನ ರಾಜನಾಗುವನೆಂದು ತಿಳಿದು, ಆ ಮಗುವನ್ನು ಕೊಲ್ಲಿಸುವ ಅನೇಕ ಉಪಾಯಗಳನ್ನು ಹೂಡಿ ಅದು ಫಲಕಾರಿಯಾಗದೆ, ಅವನು ಬೇರೆಡೆ ಬೆಳೆಯುತ್ತಿರುವ ಸುದ್ದಿ ತಿಳಿದು ಕೊಲ್ಲಿಸುವ ಪ್ರಯತ್ನ ಮಾಡುತ್ತಾನೆ. ದೈವ ಪ್ರಯತ್ನದಿಂದ ಧನಕೀರ್ತಿ ಬದುಕುಳಿದು ಶ್ರೀದತ್ತ ಶೆಟ್ಟಿಯ ಅಳಿಯನಾಗುವ ಸಂದರ್ಭ ಒದಗಿ ಬರುತ್ತದೆ ಆದರೂ ಮಾವನ ಆಂತರ್ಯದ ಆಸೆ, ಕಪಟತೆ ನಾಶವಾಗದೆ ಇವನನ್ನು ಕೊಲ್ಲುವ ಮತ್ತೊಂದು ಉಪಾಯ ಮಾಡುತ್ತಾನೆ. ನಾಗಾಲಯಕ್ಕೆ ಮಧ್ಯರಾತ್ರಿಯಲ್ಲಿ ಪೂಜೆ ಮಾಡಲು ಒಬ್ಬನನ್ನೇ ಕಳುಹಿಸಿ, ಚಾಂಡಾಲರನ್ನು ನೇಮಿಸಿ ಅವನನ್ನು ಕೊಲ್ಲಲು ಆದೇಶಿಸುತ್ತಾನೆ. ಈ ಸಂದರ್ಭದಲ್ಲಿ ಈ ಮೇಲಿನ ಪದ್ಯ ಬಂದಿದೆ.

ಚಾಂಡಾಲರು ಒಡೆಯನ ಆದೇಶದಂತೆ ಒಳಹೊಕ್ಕು ಯಾರೆಂದೂ ನೋಡದೆ ತಕ್ಷಣವೇ ಬಾಗಿಲ ಮರೆಯಲ್ಲಿ ನಿಂತಿದ್ದು ಅವನ ಮೇಲೆ ಹರಿಹಾಯ್ದು ತಲೆಯನ್ನು ಹಿಡಿದು ಎತ್ತಿ ಭೂಮಿಗೆ ಅಪ್ಪಳಿಸಿ ಇವನ ಅಂಗಾಂಗಳನ್ನೆಲ್ಲಾ ಕತ್ತರಿಸಿ ಕ್ರೂರವಾಗಿ ಕೊಂದರು. ಅಲ್ಲಿ ಬಂದಿದ್ದವನು ಶ್ರೀದತ್ತ ಶೆಟ್ಟಿಯ ಮಗನಾದ ಮಹಾಬಲ ಎಂದು ತಿಳಿಯದ ತಳಾರನು ಹೆದರಿ ತನ್ನ ಈ ಕಾರ್ಯ ಯಾರಿಗೂ ಗೊತ್ತಾಗದಂತೆ ನಾಗದೇವಾಲಯದಿಂದ ಹೊರಬಂದನು.

ಹೇಗೆ ಮನುಷ್ಯ ಬೇರೆಯವರಿಗೆ ಕೆಡಕು ಮಾಡಲು ಹೋದರೆ ಅದು ತನಗೆ ಕೆಡುಕಾಗುತ್ತದೆ ಎನ್ನುವ ಅಂಶ ಈ ಪದ್ಯದ ಮೂಲಕ ತಿಳಿಯುತ್ತದೆ. ಪುಣ್ಯವಂತರು ಇಂತಹ ಕೆಡುಕಿಗೆ ಬಲಿಯಾಗುವುದಿಲ್ಲ ಎನ್ನುವ ಕವಿ ಮಾತು ಸತ್ಯವಾಗುತ್ತದೆ. ತಾನೊಂದು ಬಗೆದರೆ ಮಾನವ ಬೇರೊಂದು ಬಗೆವುದು ದೈವ ಎನ್ನುವ ನಾಣುನುಡಿಯನ್ನು ನೆನಪಿಸಿಕೊಳ್ಳಬಹುದು.

(ಸೂಚನೆ: ಉಳಿದ ಪದ್ಯಗಳಿಗೂ ಪ್ರಯತ್ನಿಸಿ)

**ಎಸ್.ಎನ್. ನಿರ್ಮಲಾದೇವಿ**
ಕನ್ನಡ ವಿಭಾಗ